ಕ್ರ.ಸಂ: B2/GFL/Approach Road /CR-19/2022-23

ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ.
ಕೆನರಾ ವೃತ್ತ, ಶಿರಸಿ.
ದಿನಾಂಕ:02-06-2023.

ಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ,(ಅಸಂಕಾ)
ಬೆಂಗಳೂರು-03

ಮಾನ್ಯರೇ,

ವಿಷಯ: Diversion of 0.0456 ha. of Forest land in Sy No:07, of Gowdalli village, Sirsi Taluk, Uttara Kannada District(Sirsi Forest Division) for connecting Approach Road to Malki Land Sy No:4/3, 4/9, 5/4 & 5/5 of Gowdalli Village, Sirsi Taluk, Uttara Kannada District in favour of Ramachandra Ramesh Hulekal S/o Ramesh Hulekal S/o Sirsi.

**Proposal No:FP/KA/ROAD/156860/2022.**

ಉಲ್ಲೇಖ:1 ತಮ್ಮ ಕಚೇರಿ ಪತ್ರ ಸಂಖ್ಯೆ:ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಎ52ಕೆ (ಜಿಎಫ್‌ಎಲ್)/24/2022-ಎಫ್.ಸಿ ದಿನಾಂಕ:08-03-2023.

2 ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ ರವರ ಪತ್ರ ಸಂಖ್ಯೆ:ಎ3 /ಎಫ್.ಸಿ/ಸಿಆರ್-40/22-23/23-24/529 ದಿನಾಂಕ:30-05-2023.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿರಸಿ ತಾಲೂಕಿನ ಶಿರಸಿ ವಲಯ ವ್ಯಾಪ್ತಿಯ ಗೌಡಳ್ಳಿ ಗ್ರಾಮದ ಅರಣ್ಯ ಸ ನಂ:07 ರಲ್ಲಿ ಶ್ರೀ ರಾಮಚಂದ್ರ ರಮೇಶ ಹುಲೇಕಲ್ ಸಾ॥ಗೌಡಳ್ಳಿ ಇವರು ಸಂಪರ್ಕ ರಸ್ತೆಗಾಗಿ ಅರಣ್ಯ ಜಾಗ 0.0456 ಹೆ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಅನುಮತಿ ನೀಡುವ ಬಗ್ಗೆ ಅಭಿಪ್ರಾಯವನ್ನು ನೀಡಲು ಉಲ್ಲೇಖ (1) ರನ್ವಯ ಆದೇಶಿಸಿದಂತೆ, ಉಲ್ಲೇಖಿತ ಪತ್ರ 2 ರ ಪತ್ರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ರವರು. ಸದರಿ ವರದಿಯ ಅಂಶಗಳ ಕುರಿತು ದಿನಾಂಕ: 29-05-2023 ರಂದು ಸದರಿ ಪ್ರಸ್ತಾಪಿತ ಸ್ಥಳವನ್ನು ಪರಿಶೀಲಿಸಿದ್ದು, ವಲಯ ಅರಣ್ಯಾಧಿಕಾರಿ ಶಿರಸಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ರವರ ವರದಿಯಂತೆ ಸದರಿ ಅಂಶಗಳು ನಿಜವಿರುತ್ತದೆ. ಗೌಡಳ್ಳಿ ಗ್ರಾಮದ ಅರಣ್ಯ ಸ ನಂ:07 ರ ಕ್ಷೇತ್ರದಲ್ಲಿ 0.0456 ಹೆ ಕ್ಷೇತ್ರವನ್ನು ರಸ್ತೆಗಾಗಿ ಬಳಸಿಕೊಳ್ಳಲು ಉಲ್ಲೇಖ (1) ರಲ್ಲಿ ಕೇಳಿರುವ ಅಂಶಗಳಿಗೆ ಈ ಕೆಳಗಿನಂತೆ ವರದಿ ಸಲ್ಲಿಸಲಾಗಿದೆ.

1. ಸದರಿ ಅರಣ್ಯ ಸಂಪರ್ಕ ರಸ್ತೆಯು ಕಚ್ಚಾ ರಸ್ತೆ ಬಂಡಿ ಜಾಡು (cart road) ರಸ್ತೆಯಾಗಿರುತ್ತದೆ. ಸದರಿ ಮಾಲ್ಕಿ ಕ್ಷೇತ್ರಕ್ಕೆ ಹೋಗಲು ಬೇರೆ ಯಾವುದೇ ಸಂಪರ್ಕ ರಸ್ತೆ ಇಲ್ಲದೇ ಇರುವುದರಿಂದ ಉಪಯೋಗಿ ಸಂಸ್ಥೆಯವರು ಪ್ರಸ್ತಾಪಿತ ರಸ್ತೆಯನ್ನು ಸಂಪರ್ಕ ರಸ್ತೆಯನ್ನಾಗಿ ಬಳಸಲು ಕೋರಿಕೊಂಡಿರುತ್ತಾರೆ. ಈ ಬಗ್ಗೆ ಸ್ಪಷ್ಟೀಕರಣ ನೀಡಿ ಈಗಾಗಲೇ ದಾಖಲೆಗಳನ್ನು & ಮುಚ್ಚಳಿಕೆ ಪತ್ರವನ್ನು ನೀಡಿರುತ್ತಾರೆ.
2. 2 ನೇ ಅಂಶದ ಬಗ್ಗೆ ಉಪಯೋಗಿ ಸಂಸ್ಥೆಯವರಿಗೆ ಸ್ಪಷ್ಟೀಕರಣ ಕೇಳಲಾಗಿ ಸದರಿಯವರು, ಮುಂದಿನ ದಿನಗಳಲ್ಲಿ ತಮ್ಮ ಮಾಲ್ಕಿ ಪ್ರದೇಶವನ್ನು (Non Agricultural Land) ಆಗಿ ಪರಿವರ್ತನೆ ಮಾಡಲು ಸರ್ಕಾರದ ಆದೇಶದಂತೆ 30 ಅಡಿ ಅಗಲದ ಸಂಪರ್ಕ ರಸ್ತೆಯ ಅವಶ್ಯಕತೆ ಇರುತ್ತದೆ. ಮತ್ತು ಸದರಿ ಪ್ರದೇಶಕ್ಕೆ ತೆರಳಲು ಯಾವುದೇ ಪರ್ಯಾಯ ರಸ್ತೆ ಇರದ ಕಾರಣ 30.40 ಮೀಟರ್ ಉದ್ದದ ರಸ್ತೆಯ ಅವಶ್ಯಕತೆ ಇರುತ್ತದೆ ಎಂಬ ಮುಚ್ಚಳಿಕೆಯನ್ನು ನೀಡಿರುತ್ತಾರೆ.
3. ಸದರಿ ಪ್ರಸ್ತಾಪಿತ ಮಾಲ್ಕಿ ಜಾಗಕ್ಕೆ ಹೋಗಲು ಬದಲಿ ರಸ್ತೆ ಮಾರ್ಗ ಯಾವುದೂ ಇರುವುದಿಲ್ಲ.

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಉಲ್ಲೇಖಿತ ಪತ್ರ (2) ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ಇವರು ಸಲ್ಲಿಸಿರುವ ದಾಖಲೆಗಳನ್ನು ಈ ಪತ್ರದೊಂದಿಗೆ ಲಗ್ತಿರಿಸಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಅರಣ್ಯ ಸಂರಕ್ಷಣಾಧಿಕಾರಿ. 02-06-23
ಕೆನರಾ ವೃತ್ತ, ಶಿರಸಿ.